ಮೂರು ಸಹಕಾರ ಸಂಘಗಳು ಕಾರ್ಯ ಚಟುವಟಿಕೆಯಲ್ಲಿರುವುದಿಲ್ಲ. ಯಾವುವೆಂದರೆ:

೧) ಮಾನಾಕ್ಷಿಪುರಂ ಮಾನುಗಾರರ ಸಹಕಾರ ಸಂಘ ಎಡೆಹಳ್ಳಿ (ಮಾನಾಕ್ಷಿಪುರ)

೨) ಗಂಗಾಪರಮೇಶ್ವರಿ ಮಾನುಗಾರರ ಸಹಕಾರ ಸಂಘ, ಮೆಲ್ಲಹಳ್ಳಿ

೩) ಜಿಲ್ಲಾ ಮಹಿಳಾ ಮಾನುಗಾರರ ಸಹಕಾರ ಸಂಘ ಮೈಸೂರು.

ಸಿ) ಕರ್ನಾಟಕ ಸಹಕಾರಿ ಮಾನುಗಾರಿಕೆ ಮಹಾಮಂಡಳಿ ಕಾರ್ಯ ನಿರ್ವಹಿಸುತ್ತಿರುವ ರೀತಿಯಿಂದಾಗಿ ಅನೇಕ ಸಹಕಾರ ಸಂಘಗಳು ತೊಂದರೆಗೀಡಾಗಿವೆ ಎಂಬ ಬಗ್ಗೆ ಸರ್ಕಾರಕ್ಕೆ ಮನವಿ ಬಂದಿದೆ. ಆದರೆ, ಮಹಾಮಂಡಳಿಯ ಮಧ್ಯ ಪ್ರವೇಶದಿಂದ ಸಹಕಾರ ಸಂಘಗಳು ತೊಂದರೆಗೀಡಾಗಿವೆ ಎಂದು ಹೇಳಲು ಸಾಧ್ಯವಿಲ್ಲ.

ಡಿ) ಉದ್ಭವಿಸುವುದಿಲ್ಲ.

ಚಾಮುಂಡಿಬೆಟ್ಟ ಸೇರಿದಂತೆ ಮೈಸೂರು ನಗರ, ತಾಲ್ಲೂಕಿನಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವುದು.

೨೮೯೩(೩೩೨೬)

ಶ್ರೀ ಎ.ಎಸ್.ಗುರುಸ್ವಾಮಿ (ಚಾಮುಂಡೇಶ್ವರಿ): ಮಾನ್ಯ ಪ್ರವಾಸೋದ್ಯಮ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮುಂಡಿ ಬೆಟ್ಟ ಸೇರಿದಂತೆ ಮೈಸೂರು ತಾಲ್ಲೂಕು ಮತ್ತು ಮೈಸೂರು ನಗರದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಆ) ಇಲಾಖಾ ಕಾರ್ಯಕ್ರಮಗಳನ್ನು ಆಕರ್ಷಣೀಯ ಮತ್ತು ಲಾಭದಾಯಕವನ್ನಾಗಿ ಮಾಡಲು ಇಲಾಖೆ ಕೈಗೊಂಡಿರುವ ಕ್ರಮವೇನು?

ಇ) ಈ ಕಾರ್ಯಕ್ರಮಗಳಲ್ಲಿ ಚಾಮುಂಡಿ ಬೆಟ್ಟಕ್ಕೆ ರೋಪ್ ವೇ ಅಳವಡಿಸುವ ಪ್ರಸ್ತಾವನೆ ಇದೆಯೇ? ಹಾಗಿದ್ದರೆ, ಇದಕ್ಕೆ ಆಗಬಹುದಾದ ವೆಚ್ಚವೆಷ್ಟು?

ಯೋಜನೆಯನ್ನು ಯಾವಾಗ ಜಾರಿಗೊಳಿಸಲಾಗುವುದು?

ಈ) ಮೈಸೂರು ತಾಲ್ಲೂಕಿನಲ್ಲಿ ಇಲಾಖೆಯು ಗುರುತಿಸಿರುವ ಪ್ರೇಕ್ಷಣೀಯ ಸ್ಥಳಗಳು ಯಾವುವು? ಅವುಗಳ ಅಭಿವೃದ್ಧಿಗೆ ರೂಪಿಸಿರುವ ಯೋಜನೆಗಳೇನು? (ವಿವರ ಕೊಡುವುದು)

ಶ್ರೀ ಆರ್.ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು):

ಅ) ಸರ್ಕಾರದಿಂದ ಮೈಸೂರು ಪಟ್ಟಣ ಮತ್ತು ಮೈಸೂರು ತಾಲ್ಲೂಕಿನಲ್ಲಿ ಈ ಕೆಳಕಂಡ ಪ್ರವಾಸೋದ್ಯಮ ಚಟುವಟಿಕೆಗಳನ್ನು ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಕೈಗೊಳ್ಳಲಾಗಿದೆ.

೧. ಮೈಸೂರು ನಗರಕ್ಕೆ ಭೇಟಿ ನೀಡುವ ಪ್ರವಾಸಿಗರಿಗೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧೀನದಲ್ಲಿರುವ ಹೋಟೆಲ್ ಮಯೂರ ಹೊಯ್ಸಳ ಹಾಗೂ ಮಯೂರ ಯಾತ್ರಿನಿವಾಸವು ವಸತಿ ಸೌಲಭ್ಯವನ್ನು ಒದಗಿಸುತ್ತಿದೆ.

೨. ಜನಪ್ರಿಯ ಪ್ರವಾಸಿ ಸ್ಥಳಗಳಿಗೆ ಹಾಗೂ ಮೈಸೂರಿನ ಸುತ್ತಮುತ್ತ ಇರುವ ಪ್ರವಾಸಿ ಸ್ಥಳಗಳಿಗೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ಪ್ರವಾಸಿಗರಿಗಾಗಿ ವ್ಯವಸ್ಥಿತ ಪ್ರವಾಸಗಳನ್ನು ಏರ್ಪಡಿಸುತ್ತಿದೆ.

೩. ಪ್ರವಾಸಿ ವಲಯದಲ್ಲಿ ಮೈಸೂರನ್ನು ಹಾಗೂ ಸುತ್ತ ಮುತ್ತಲಿನ ಪ್ರವಾಸಿ ಸ್ಥಳಗಳನ್ನು ಗುರುತಿಸಿದೆ. ಇಲಾಖೆಯಿಂದ ಹೊರತಂದಿರುವ ಪ್ರವಾಸಿ ಮಾಹಿತಿ ಮಡಿಕೆಗಳಲ್ಲಿ ಮೈಸೂರು ಹಾಗೂ ಸುತ್ತಮುತ್ತಲಿನ ಪ್ರವಾಸಿ ಸ್ಥಳಗಳನ್ನು ವಿಶೇಷವಾಗಿ ಬೆಳಕು ಬೀರುವಂತೆ ಮುದ್ರಿಸಲಾಗಿದೆ.

೪. ಹೊನಲು ಬೆಳಕನ್ನು ಸೆಂಟ್ ಫಿಲೋಮಿನಾ ಚರ್ಚ್‌ಗೆ ಅಳವಡಿಸಲಾಗಿದೆ.

ಆ) ೧. ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸುವ ಸಲುವಾಗಿ ವರ್ಣರಂಜಿತ ಪ್ರವಾಸಿ ಮಾಹಿತಿ ಮಡಿಕೆಗಳನ್ನು ಹೊರತರಲಾಗಿದೆ.

೨. ಖಾಸಗಿ ಬಂಡವಾಳದಾರರನ್ನು ಪ್ರವಾಸೋದ್ಯಮ ಯೋಜನೆಗಳಲ್ಲಿ ಬಂಡವಾಳವನ್ನು ಹೂಡುವಂತೆ ಪ್ರೇರೇಪಿಸಲು ಸಹಾಯಧನ ಹಾಗೂ ಬಡ್ಡಿಯಾಯಿತಿಗಳನ್ನು ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

೩. ವಿವಿಧ ಪ್ರವಾಸಿ ಸ್ಥಳಗಳಲ್ಲಿ ಮೂಲಭೂತ ಸೌಲಭ್ಯಗಳನ್ನೊದಗಿಸಿ ಅನುಕೂಲಗಳನ್ನು ಹೆಚ್ಚಿಸಲಾಗುತ್ತಿದೆ.

೪. ದೇಶದ ಮಹಾನಗರಗಳಲ್ಲಿ ರೋಡ್ ಷೋಗಳನ್ನು ಏರ್ಪಡಿಸಿ ತನ್ಮೂಲಕ ರಾಜ್ಯಕ್ಕೆ ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸಲಾಗುತ್ತಿದೆ.

೫. ರಾಜ್ಯದ ಆಕರ್ಷಣೆ ಬಗ್ಗೆ ವಿಶ್ವದಾದ್ಯಂತ ಪ್ರವಾಸಿ ಮಾಹಿತಿಯನ್ನು ಪ್ರಚಾರ ಪಡಿಸಲು ಇಲಾಖೆಯು ವೆಬ್ ಸೈಟ್‌ನ್ನು ಅಳವಡಿಸಿದೆ.

೬. ಇಲಾಖೆಯು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರವಾಸಿ ಮೇಳಗಳಲ್ಲಿ ಹಾಗೂ ಪ್ರವಾಸಿ ಉತ್ಸವಗಳನ್ನು ಭಾಗವಹಿಸುವುದರ ಮೂಲಕ ಗರಿಷ್ಠ ಪ್ರಮಾಣದ ಪ್ರವಾಸಿಗರನ್ನು ರಾಜ್ಯಕ್ಕೆ ಆಕರ್ಷಿಸಲು ಪ್ರಯತ್ನಿಸಲಾಗುತ್ತಿದೆ.

೭. ಇಲಾಖೆಯು ಟ್ರಾವೆಲ್ ಏಜೆಂಟ್‌ರುಗಳು, ಟೂರ್ ಆಪರೇಟರ್‌ಗಳು ಹಾಗೂ ಪ್ರವಾಸಿ ಬರಹಗಾರರು ಇವರುಗಳಿಗೆ ಫ್ಯಾಮ್ ಟೂರ್ (ಪರಿಚಯ ಪ್ರವಾಸ)ಗಳನ್ನು ಏರ್ಪಡಿಸುವುದರ ಮೂಲಕ ರಾಜ್ಯದ ಪ್ರವಾಸಿ ಆಕರ್ಷಣೆಯ ಬಗ್ಗೆ ಅರಿವು ಮೂಡಿಸಿ ಹೆಚ್ಚು ಹೆಚ್ಚು ಪ್ರವಾಸಿಗರನ್ನು ರಾಜ್ಯಕ್ಕೆ ಕಳುಹಿಸಲು ಪ್ರೇರೇಪಿಸುತ್ತಿದೆ.

೮) ಚಾಮುಂಡಿ ಬೆಟ್ಟಕ್ಕೆ ರೋಪ್ ವೇ ಅಳವಡಿಸುವ ವಿಚಾರ ಸರ್ಕಾರದ ಗಮನದಲ್ಲಿದೆ.

ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ಖಾಸಗಿ ಬಂಡವಾಳದಾರರು ಮುಂದ ಬಂದಲ್ಲಿ ಅವರಿಗೆ ಸಹಕಾರ ನೀಡಲಾಗುವುದು.

೯) ಮೈಸೂರು ತಾಲ್ಲೂಕಿನಲ್ಲಿ ಈ ಕೆಳಕಂಡ ಸ್ಥಳಗಳನ್ನು ಪ್ರೇಕ್ಷಣೀಯ ಸ್ಥಳಗಳೆಂದು ಗುರುತಿಸಲಾಗಿದೆ:

ಚಾಮುಂಡಿ ಬೆಟ್ಟ ಮಹಾರಾಜರ ಅರಮನೆ, ಜಗನ್ಮೋಹನ ಅರಮನೆ ಪ್ರಾಣಿ ಸಂಗ್ರಹಾಲಯ ಮತ್ತು ಗೊಮ್ಮಟಗಿರಿ.

ಈ ಕ್ಷೇತ್ರಗಳ ಅಭಿವೃದ್ಧಿಗೆ ರೂಪಿಸಿರುವ ಯೋಜನೆಗಳ ಬಗ್ಗೆ ಮೇಲಿನ ಉತ್ತರದಲ್ಲಿ ವಿವರಿಸಲಾಗಿದೆ.

ಮೈಸೂರು ತಾಲ್ಲೂಕಿನಲ್ಲಿ ಸಂಚಾರಿ ಪಶು ಚಿಕಿತ್ಸಾಲಯ ಪ್ರಾರಂಭಿಸುವುದು.

೨೮೯೪(ತಿತಿ೨೭)

ಶ್ರೀ ಗುರುಸ್ವಾಮಿ ಎ.ಎಸ್.(ಚಾಮುಂಡೇಶ್ವರಿ): ಮಾನ್ಯ ಪಶು ಸಂಗೋಪನೆ ಮತ್ತು